# 1. ಮಾವು

ಹಣ್ಣುಗಳ ರಾಜ ಎಂದೇ ಕರಯಲಾಗುವ ಮಾವು ಭಾರತದ ಪಮುಖ ಹಣನ ಬೆಳಯಾಗಿದೆ. ಇದರ ಹಣ್ಣುಗಳು ರುಚಿಕರವಾಗಿದ್ದು "ಎ" ಮತ್ತು "ಸಿ" ಜೀವಸತ್ವಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿವೆ.

**ಮಣ್ಣು :** ಮಾವಿನ ಬೆಳೆಯನ್ನು ವಿವಿಧ ರೀತಿಯ ಮಣ್ಣುಗಳಲ್ಲಿ ಬೆಳೆಯಬಹುದಾಗಿದೆ. ವಿಶೇಷವಾಗಿ ಆಳವಾದ, ಚೆನ್ನಾಗಿ ನೀರು ಬಸಿದು ಹೋಗುವಂತಹ ಮಣ್ಣು ಹೆಚ್ಚು ಸೂಕ್ತ. ಕೆಂಪುಗೋಡು ಮಣ್ಣು ಅತೀ ಸೂಕ್ತ.

**ಹವಾಗುಣ ಮತ್ತು ನಾಟಿ ಕಾಲ :** ಈ ಬೆಳೆಯು ಉಷ್ಣವಲಯದ ಬೆಳೆಯಾಗಿದ್ದು, ಜೂನ್‌ಜುಲೈ ತಿಂಗಳುಗಳುಮಾವು ಸಸಿಗಳನ್ನು ನಾಟಿ ಮಾಡಲು ಅತೀ ಸೂಕ್ತ.

**ತಳಿಗಳು**

**ಅರೆಮಲೆನಾಡು ಮತ್ತು ಒಣ ಪ್ರದೇಶಗಳಿಗೆ ಸೂಕ್ತವಾದ ತಳಿಗಳು**

ಬಾದಾಮಿ / ಆಪೂಸ್ (ಅಲ್ಫಾನ್ಸೋ),ರಸಪುರಿ / ಕಲಮಿ (ಪೈರಿ),ತೋತಾಪುರಿ (ಬೆಂಗಳೂರ),ಮಲಗೋವ,ನೀಲಂ,ಬೆನಶಾನ್,ದಶಹರಿ

**ಸಂಕರಣ ತಳಿಗಳು**

**1) ಮಲ್ಲಿಕಾ, 2) ನೀಲ್ಗೋವ 3) ನೀಲೆಶಾನ್ 4)ಆಮಪಾಲಿ**

**ಬೇಸಾಯ ಸಾಮಗ್ರಿಗಳು**

**1) ಕಸಿ ಸಸಿಗಳು**

| **ಅಂತರ (ಮಣ್ಣಿನ ಫಲವತ್ತತೆ ಮತ್ತು ತಳಿಗೆ ಅನುಗುಣವಾಗಿ)** | **ಪ್ರತಿ ಹೆಕ್ಟೇರಿಗೆ** |
|---|---|
| 5 ಮೀ. x 5 ಮೀ. | 400 |
| 10 ಮೀ. x 10 ಮೀ. | 100 |

**2) ಸಸಿಗಳು**

| | |
|---|---|
| 5 ಮೀ. x 5 ಮೀ. | 400 |
| 10 ಮೀ. x 10 ಮೀ. | 100 |

| 3) | **ಸಾವಯವ ಗೊಬ್ಬರ :** | **ಪತಿ ಗಿಡಕ್ಕ / ಪತಿ ವರ್ಷ** |
|---|---|---|
| | **ಕೊಟ್ಟಿಗೆ ಗೊಬ್ಬರ / ಕಾಂಪೋಸ್ಟ್** | |
| | ನಾಟಿಗೆ ಮುಂಚೆ | 25 ಕಿ.ಗ್ರಾಂ. |
| | ರಾಸಾಯನಿಕ ಗೊಬ್ಬರ ಕೊಡುವುದಕ್ಕೆ ಮುಂಚೆ | 25 ಕಿ.ಗ್ರಾಂ. |

**ರಾಸಾಯನಿಕ ಗೊಬ್ಬರಗಳು ಗ್ರಾಂ/ ಪ್ರತಿ ಗಿಡಕ್ಕೆ :** 730 180 680 **ಸಾ. ರಂ. ಪೊ.**

**ಹತ್ತು ಹಾಗೂ ನಂತರ**

**ಬೇಸಾಯ ಕ್ರಮಗಳು**

**ಕಸಿಗಿಡಗಳ ಆಯ್ಕೆ :** ಆರೋಗ್ಯಯುತವಾದ, ನೇರವಾಗಿ ಬೆಳೆದ ಒಂದು ವರ್ಷ ವಯಸ್ಸಿನ, ಉತ್ತಮವಾಗಿ ಬೆಸೆದುಕೊಂಡ ಕಸಿಗಿಡಗಳನ್ನು ಆಯ್ಕೆ ಮಾಡಬೇಕು. ಹೆಚ್ಚು ವಯಸ್ಸಿನ ಗಿಡಗಳು ಸೂಕ್ತವಲ್ಲ.

**ನಾಟಿ ಮಾಡುವುದು :** ಭೂಮಿಯನ್ನು ಚೆನ್ನಾಗಿ ಸಿದ್ಧಪಡಿಸಿಕೊಂಡು ಶಿಫಾರಸ್ಸು ಮಾಡಿದ ಅಂತರದಲ್ಲಿ 90 x 90 x 90 ಸೆಂ.ಮೀ. ಗಾತ್ರದಗುಣಿಗಳನ್ನು ತೆಗೆಯಬೇಕು.

**ನಾಟಿ ನಂತರದ ಬೇಸಾಯ:** ಗಿಡಗಳ ಸುತ್ತಲೂ ಪಾತಿ ಮಾಡಿ, ಶಿಫಾರಸ್ಸು ಮಾಡಿದ ಗೊಬ್ಬರಗಳನ್ನು ಮಳೆಗಾಲ (ಜೂನ್ ಜುಲೈ) ದಲ್ಲಿಒದಗಿಸಬೇಕು.

**ಕೊಯ್ಲು ಮತ್ತು ಇಳುವರಿ :** 4 ವರ್ಷಗಳನಂತರ ನಿಯಮಿತವಾಗಿ ಹಣ್ಣು ಪಡೆಯುವುದನ್ನು ಪ್ರೋತ್ಸಾಹಿಸಬೇಕು. ಹತ್ತು ವರ್ಷಗಳ ನಂತರ ಆರ್ಥಿಕ ಇಳುವರಿ ದೊರಕುತ್ತದೆ.ಹಣ್ಣುಗಳನ್ನು ಜಾಗರೂಕತೆಯಿಂದ ಸುಧಾರಿತ ಸಾಧನಗಳ ಬಳಕೆ ಮಾಡುವ ಮೂಲಕ ಕೊಯ್ಲು ಮಾಡಬೇಕು.

| **ಹಣ್ಣಿನ ಇಳುವರಿ:** | **ಗಿಡದ ವಯಸ್ಸು** | **ಪತಿ ಗಿಡಕ್ಕ ಹಣ್ಣುಗಳ ಸಂಖ್ಯೆ** | **ಪತಿ ಹೆಕ್ಟೇರಿಗೆ (ಕ್ವಿಂಟಾಲ್)** |
|---|---|---|---|
| | 5–10 ವರ್ಷ | 50–500 | 10.0–100.0 |
| | 11–20 ವರ್ಷ | 500–1500 | 100.0–300.0 |